

# ಕ್ಯಾಮೆರಾ ಕಣ್ಣಲ್ಲಿ ನಿಸರ್ಗ



▸ ಇಂಗ್ಲೆಂಡ್‌ನ ರಾಣಿ ಮಹಾ ಪೋಷಕರಾಗಿರುವ ವಿಶ್ವದ ಅತ್ಯಂತ ಹಳೆಯ ಫೋಟೋಗ್ರಫಿಕ್ ಸೊಸೈಟಿಯಾದ (ಸುಮಾರು 150 ವರ್ಷ) ರಾಯಲ್ ಫೋಟೋಗ್ರಫಿಕ್ ಸೊಸೈಟಿ ನೀಡುವ ಅತ್ಯುನ್ನತ ಫೆಲೋಶಿಪ್ ಪಡೆವ ಕನಸು ಎಲ್ಲ ಛಾಯಾಗ್ರಾಹಕರದ್ದು.

▸ ಈ ಪುರಸ್ಕಾರ ರಾಜ್ಯದ ಎಂ.ವೈ.ಘೋರ್ಪಡೆ, ಟಿ.ಆರ್.ಎ.ಪೆರುಮಾಳ್, ವಿ.ಶ್ರೀನಿವಾಸ್, ನಾಗರಾಜ್, ಬಿ.ಎನ್.ಎಸ್.ದೇವ್, ಆರ್.ದೇವ್, ಅಲ್ಲಮಪ್ರಭು ಹಾಗೂ ತಿಪ್ಪೇಸ್ವಾಮಿ ಅವರಿಗೆ ದೊರಕಿದೆ. ತಿಪ್ಪೇಸ್ವಾಮಿ ಅವರಿಗೆ ಈ ಪುರಸ್ಕಾರ ದೊರಕಿದ 18 ವರ್ಷಗಳ ನಂತರ ಭಾರತೀಯ ಅರಣ್ಯ ಸೇವೆಯ ಹಿರಿಯ ಅಧಿಕಾರಿ ಕನ್ನಡಿಗರಾದ ಎಂ.ಎನ್.ಜಯಕುಮಾರ್‌ಗೆ ಈಗ ದೊರಕಿದೆ. ಈ ಪುರಸ್ಕಾರ ಪಡೆದ ಪ್ರಥಮ ಐಎಫ್‌ಎಸ್ ಅಧಿಕಾರಿ ಎನ್ನುವ ಹೆಮ್ಮೆ ಸಹ ಇವರದ್ದು.

▸ ಹದಿನಾರು ವರ್ಷಗಳ ಛಾಯಾಗ್ರಹಣ ಕೃಷಿ ಆರಂಭಿಸಿದ ಇವರಿಗೆ 1994ರಲ್ಲಿ ಅಸೋಸಿಯೇಷನ್ ಆಫ್ ರಾಯಲ್ ಫೋಟೋಗ್ರಫಿಕ್ ಸೊಸೈಟಿ ಪುರಸ್ಕಾರ, 1998ರಲ್ಲಿ ಯುನೆಸ್ಕೋದ ಫೆಡರೇಷನ್ ಆಫ್ ಇಂಟರ್‌ನ್ಯಾಷನಲ್ ಆರ್ಟ್ ಫೋಟೋಗ್ರಫಿ, 2002ರಲ್ಲಿ ಇಎಫ್‌ಐಎಪಿ ದೊರಕಿದೆ. ಇದರ ಜೊತೆಯಲ್ಲಿ 50 ರಾಷ್ಟ್ರೀಯ ಪ್ರಶಸ್ತಿಗಳು ಹಾಗೂ ಐದಾರು ಅಂತರರಾಷ್ಟ್ರೀಯ ಪ್ರಶಸ್ತಿ ದೊರಕಿದೆ. 2001ರಲ್ಲಿ ಹಲವು ಛಾಯಾಗ್ರಹಕರ ಜೊತೆ ಸೇರಿ 'ಬಯೋ ಡೈವರ್ಸಿಟಿ ಆಫ್ ಕರ್ನಾಟಕ' ಸಚಿತ್ರ ಪುಸ್ತಕವನ್ನು ಸಹ ಹೊರತಂದಿದ್ದಾರೆ. ಇವರನ್ನು 'ಸುಧಾ' ಮಾತಿಗೆ ಎಳೆದಾಗ.....

■ **ಯತೀಶ್ ಕುಮಾರ್ ಜಿ.ಡಿ**

**★ ಫೋಟೋಗ್ರಫಿಯ ಆಸಕ್ತಿ ಬೆಳೆದಿದ್ದು ಹೇಗೆ?**

ಚಿಕ್ಕಂದಿನಿಂದಲೂ ಕಾಡಿನಲ್ಲಿ ಸುತ್ತುವ ಆಸಕ್ತಿ ಇತ್ತು. 1971ರಲ್ಲಿ ಕಬಿನಿ ಹಿನ್ನೀರಿನ ಕಾಕನಕೋಟೆಯ ಕೊನೆಯ ಖೆಡ್ಡಾ ನೋಡುವ ಅವಕಾಶ ನನ್ನ ತಂದೆಯಿಂದ ದೊರಕಿತು. 79ರಲ್ಲಿ ಅರಣ್ಯ ಇಲಾಖೆ ಸೇರಿದ ನಂತರ 78ರಲ್ಲಿ ಮೈಸೂರಿನ ಮೃಗಾಲಯದ ಉಸ್ತುವಾರಿ ವಹಿಸಿ ಪ್ರಾಣಿ ಪಕ್ಷಿಗಳ ಜೊತೆ ಕಳೆಯುವ ಅವಕಾಶ ದೊರಕಿತು. 91ರಿಂದ 95ರವರೆಗೆ ಮೈಸೂರು ಎಸಿಎಫ್ ಆಗಿದ್ದಾಗ ಕಬಿನಿ ಹಾಗೂ ಕೇರಳ ಗಡಿ ಪ್ರದೇಶವಾದ ಬಾವಲಿವರೆಗೂ ವ್ಯಾಪ್ತಿಯಿತ್ತು. ಆಗ ಮೈಸೂರಿಗೆ ವನ್ಯಜೀವಿ ಛಾಯಾಗ್ರಾಹಕರು ಬರುತ್ತಿದ್ದರು. ಅವರಲ್ಲಿ ಪೆರುಮಾಳ್, ಹನುಮಂತರಾವ್, ಮಧ್ಯಪ್ರದೇಶದ ಕೊರಿಯ ಪ್ರದೇಶದ ಮಹಾರಾಜ ಡಿ.ಎನ್.ಎಸ್.ದೇವ್, ಎಸ್.ಜಿ.ನೇಗಿನಾಳ್ ಹಾಗೂ ಡಾ.ಮುಖರ್ಜಿ ಪ್ರಮುಖರು. ಇವರಿಂದ ಆಸಕ್ತಿ ಮತ್ತಷ್ಟು ಹೆಚ್ಚಾಯಿತು.

**★ ಕ್ಯಾಮೆರಾ ಕೈಗೆತ್ತಿಕೊಂಡಿದ್ದು ಹೇಗೆ?**

93ರಲ್ಲಿ ನೇಗಿನಾಳ್ ಅವರು, 'ಮೈಸೂರಿಗೆ ವನ್ಯಜೀವಿಗಳ ಚಿತ್ರ ತೆಗೆಯಲು ನಾವೆಲ್ಲಾ ಬರುತ್ತಿದ್ದೇವೆ. ಆದರೆ ನೀವು ಇಲ್ಲೇ ಇದ್ದು ಸಮಯ ವೇಸ್ಟ್ ಮಾಡ್ತಿದ್ದೀರಿ' ಅಂದ್ರು. ಅಲ್ಲಿಂದ ಅಂದರೆ ಹದಿನಾರು ವರ್ಷಗಳ ಹಿಂದೆ ಆರಂಭವಾದ ಛಾಯಾ ಗ್ರಹಣ ಇಲ್ಲಿಯವರೆಗೂ ನಡೆಯುತ್ತಿದೆ. 94ರಲ್ಲಿ ನನ್ನ ಪತ್ನಿ ಆಶಾ ಜಯಕುಮಾರ್ ಸಹ ಛಾಯಾಗ್ರಹಣ ಆರಂಭಿಸಿದರು. ಅವರಿಗೂ ಹಲವಾರು ಪ್ರಶಸ್ತಿ ಹುಡುಕಿಕೊಂಡು ಬಂದಿದೆ.

**★ ರೋಚಕ ಅನುಭವದ ಬಗ್ಗೆ ಹೇಳಿ?**

ನಾನು ಮತ್ತು ಪೆರುಮಾಳ್ ಕಬಿನಿ ಹಿನ್ನೀರಿನ ದ್ವೀಪವೊಂದರಲ್ಲಿ ಆನೆ ಹಿಂಡನ್ನು ಕ್ಯಾಮೆರಾದಲ್ಲಿ ಸೆರೆ ಹಿಡಿಯಲು ಹೋಗಿದ್ದೆವು. ಸಣ್ಣ ಕಾಲು ದಾರಿ ದ್ವೀಪವನ್ನು ಸಂಪರ್ಕಿಸುತ್ತಿತ್ತು. ಸುಮಾರು 20 ಆನೆಗಳು ದ್ವೀಪದಲ್ಲಿದ್ದವು. ಸ್ವಲ್ಪ ಹೊತ್ತು ಚಿತ್ರ ತೆಗೆಯುತ್ತಿದ್ದೆವು. ಅಷ್ಟರಲ್ಲಿ ಗುಂಪಿನ ಮುಂದಾಳಾದ ಹೆಣ್ಣಾನೆ ಗುಂಪಿನ ಜೊತೆ ಅವುಗಳ ಭಾಷೆಯಲ್ಲಿ ಮಾತನಾಡಲು ಆರಂಭಿಸಿ ನಮ್ಮ ಜೀಪನ್ನು ಅರ್ಧ ಚಂದ್ರಾಕಾರದಲ್ಲಿ ಸುತ್ತುವರಿಯಲು ಆರಂಭಿಸಿದವು. ನಮಗೆ ಅಪಾಯದ ಅರಿವಾಗಿ ಜೀಪನ್ನು ರಿವರ್ಸ್ ತೆಗೆಯುವಾಗ ಸಣ್ಣ ದಾರಿಯಲ್ಲಿ ಹಿಂದಿನಿಂದ ಮತ್ತೊಂದು ಆನೆ ಹಿಂಡು ದ್ವೀಪವನ್ನು ಪ್ರವೇಶಿಸುತ್ತಿದ್ದವು. ನಮ್ಮ ಜೀಪಿನ ಚಾಲಕ ದಾರಿಯ ಪಕ್ಕದಲ್ಲಿದ್ದ ಕಾಡಿನಲ್ಲೇ ಜೀಪನ್ನು ಹೊರತೆಗೆದ. ಆದರೂ ಆನೆಗಳು ನಮ್ಮನ್ನು ಬೆನ್ನಟ್ಟಿದವು. ಜೀಪಿನ ಹಿಂದಿನಲ್ಲಿದ್ದ ಪೆರುಮಾಳ್ ಅವರ ಮಗ ಚಿತ್ರ ತೆಗೆಯಲು ಪ್ರಯತ್ನಿಸಿದರೂ ಆಗಲಿಲ್ಲ. ಆನೆಗಳು ಜೀಪ್‌ನ ಹಿಂದೆ ಕೇವಲ ಆರೇ ಅಡಿ ದೂರದಲ್ಲಿದ್ದವು.

**★ ಇಷ್ಟೆಲ್ಲಾ ವರ್ಷ ಕಾಡಿನಲ್ಲಿ ಸುತ್ತಿದ್ದೀರಿ. ಪ್ರಾಣಿ ಪ್ರಪಂಚದಲ್ಲಿ ಏನಾದ್ರೂ ಬದಲಾವಣೆ ಆಗಿದೆಯಾ?**

ಹಿಂದೆ ಆನೆಗಳ ಗುಂಪು ದೊಡ್ಡದಾಗಿತ್ತು. 40 ಆನೆಗಳನ್ನು ಒಂದೇ ಕಡೆ ನೋಡಬಹುದಿತ್ತು. ಆದರೀಗ ಗುಂಪು ಸಣ್ಣದಾಗಿದೆ. ಆದರೆ ರಾಜ್ಯದಲ್ಲಿ 1994ರಲ್ಲಿ 2700 ಆನೆಗಳಿದ್ದವು. ಈಗ 5 ಸಾವಿರಕ್ಕೆ ಏರಿದೆ. ಹಿಂದೆ ಸಲಗಗಳು ಬಹಳ ಚೆನ್ನಾಗಿದ್ದವು. ಅಂತಹ ಸಲಗ ಹೊರಗೆ ಕಾಣಿಸಿಕೊಳ್ಳಿಲ್ಲ.

**★ ಮುಂದೇನು ಯೋಜನೆ?**

ಎರಡು ವರ್ಷಗಳ ಕಾಲ ಅರಣ್ಯ ಇಲಾಖೆಯಲ್ಲಿ ಸೇವೆ ಸಲ್ಲಿಸುವ ಅವಕಾಶವಿದೆ. ಮುಂದೆ ಸಹ ನಿಸರ್ಗವನ್ನು ಸೆರೆಹಿಡಿಯುವ ಕೆಲಸ ಮುಂದುವರೆಸುತ್ತೇನೆ.